## ಇಲ್ಲಿಯವರೆಗೆ



ಮಿಜ್ರಾಡಿನ್ ಮಿನಿ ಸೌದಿ ಅರೇಬಿಯಾದಂತಿರುವ ಪ್ರದೇಶಕ್ಕೆ ಹೋಗುತ್ತಾನೆ. ಅಲ್ಲಿದ್ದ ಮೂವರು ಇವರ ವಿಷಯಗಳನ್ನು ಯಾರೋ ಇನ್‌ಫಾರ್ಮರ್ ಪೊಲೀಸರಿಗೆ ತಿಳಿಸುತ್ತಿದ್ದಾರೆ ಎಂಬ ವಿಚಾರವನ್ನು ಮಿಜ್ರಾಡಿನ್‌ಗೆ ತಿಳಿಸುತ್ತಾರೆ. ಅದು ತನ್ನ ಸ್ನೇಹಿತ ಬೇಕರಿ ನಡೆಸುತ್ತಿರುವ ಅಬ್ದುಲ್ ಗಫಾರ್ ಖಾನ್ ಎಂಬುದು ಗೊತ್ತಾಗಿದೆ ಎಂದು ಮಿಜ್ರಾಡಿನ್ ತಿಳಿಸುತ್ತಾನೆ. ಆತನನ್ನು ಸಾಯಿಸಬೇಕು ಎಂದು ಸಂಚು ಹೂಡುತ್ತಾರೆ. ಆದರೆ ಇದು ಪರಿಹಾರವಲ್ಲ ಎಂಬ ಸತ್ಯವೂ ಅವರಿಗೆ ತಿಳಿಯುತ್ತದೆ. ಹೈದ್ರಾಬಾದ್‌ನ ಮೆಕ್ಕಾ ಮಸೀದಿಯಲ್ಲಿ ಬ್ಲಾಸ್ಟ್ ಆಗಿ 10 ಸಾವಿರ ಮಂದಿ ಸತ್ತ ಘಟನೆಯ ಕೇಸ್‌ನಲ್ಲಿ ಅಪರಾಧಿಗಳನ್ನು ಕೋರ್ಟ್ ನಿರ್ದೋಷಿಗಳೆಂದು ಸಾಬೀತುಪಡಿಸಿದ ಸುದ್ದಿಯನ್ನು ಮಿಜ್ರಾಡಿನ್ ಹೇಳುತ್ತಾನೆ. ಈ ದೇಶದಲ್ಲಿ ನಮ್ಮ ಧರ್ಮದವರಿಗೆ ನ್ಯಾಯ ಸಿಗುವುದಿಲ್ಲ ಎನ್ನುವುದಕ್ಕೆ ಇದಕ್ಕಿಂತ ನಿದರ್ಶನ ಬೇಕೇ? ಎಂದೂ ಪ್ರಶ್ನಿಸುತ್ತಾನೆ. ಆದಾಗಿ ಮರುದಿನ ರಾತ್ರಿ ಆಡಿಟೋರಿಯಂನಲ್ಲಿ ಆದ ಬ್ಲಾಸ್ಟ್‌ನಲ್ಲಿ ಇಪ್ಪತ್ತೈದು ಮಂದಿ ಸಾಯುತ್ತಾರೆ, ನೂರಾರು ಮಂದಿ ಗಾಯಗೊಳ್ಳುತ್ತಾರೆ. ಮಕ್ಕಳು ಡ್ಯಾನ್ಸ್ ಮಾಡುವಾಗ ನಡೆದ ಈ ಕೃತ್ಯದ ಬಳಿಕ ಮಿಜ್ರಾಡಿನ್, ಗಫಾರ್‌ಖಾನ್ ಅದೃಶ್ಯನಾಗುತ್ತಾರೆ. ಮತ್ತೆ ನಾಲ್ಕು ದಿನಗಳಾಗುತ್ತವೆ. ಖಾನ್ ಮಗಳು ಕಲ್ಯಾಣಿಯ ಬಳಿ ತಂದೆ ಎಲ್ಲಿರುವುದಾಗಿ ಕೃಷ್ಣ ಕೇಳುತ್ತಾನೆ. ಆ ವಿಚಾರ ತನಗೆ ತಿಳಿದಿಲ್ಲ ಎನ್ನುತ್ತಾಳೆ. ಆದಾಗಿ ತಿಹಾರ್ ಜೈಲ್ ಮೇಲೆ ದಾಳಿ ನಡೆಯುತ್ತದೆ. ಉಗ್ರವಾದಿಗಳು ಪರಾರಿಯಾಗುತ್ತಾರೆ. ಮಿಜ್ರಾಡಿನ್‌ನ ಫೋಟೊ ಕೃಷ್ಣನಿಗೆ ಸಿಗುತ್ತದೆ. ಅದಕ್ಕೆ ಚೀಫ್ ಕೃಷ್ಣನನ್ನು ಅಭಿನಂದಿಸುತ್ತಾನೆ.

ಮುಸಲ್ಮಾನರಿಗೆ ಪ್ರತ್ಯೇಕವಾದ ಒಂದು ದೇಶ (ಪಾಕಿಸ್ತಾನ್) ಬೇಕೆಂದು ಹಟ ಹಿಡಿದು, ಭಾರತ ಎರಡು ಹೋಳಾಗುವುದಕ್ಕೆ ಅವನೇ ಕಾರಣ.

ಸಿದ್ಧಾಂತ ರೀತ್ಯಾ ನೆಹರೂ–ಜಿನ್ನಾ ಬದ್ಧ ಶತ್ರುಗಳು.

ಒಂದು ಔತಣಕೂಟದಲ್ಲಿ ಜವಹರಲಾಲ್ ನೆಹರೂ 'ಜಿನ್ನಾ ಫಿನಿಶ್ ಆಗಿಬಿಟ್ಟ' ಎಂದು ಕಾಮೆಂಟ್ ಮಾಡಿದರು. ಬ್ರಿಟನ್‌ನಲ್ಲಿದ್ದ ಜಿನ್ನಾಗೆ ಆ ವಿಷಯ ತಿಳಿದು, ಸಿಟ್ಟಿನಿಂದ ಭಾರತಕ್ಕೆ ಮರಳಿ ಮುಸ್ಲಿಂ ಲೀಗ್ ಪಾರ್ಟಿಯನ್ನು ಬೆಳೆಸಿದನು. ಅದು ಅನೂಹ್ಯವಾಗಿ ಬೆಳೆದು ಭಾರತ ಪಡೆದು ಹೋಗುವುದಕ್ಕೆ ಕಾರಣವಾಯ್ತು.

ಸ್ವಾತಂತ್ರ್ಯಕ್ಕೆ ಒಂದು ವರ್ಷದ ಹಿಂದೆ ಜಿನ್ನಾಗೆ ಟಿ.ಬಿ. ಆಯಿತು. ಆ ದಿನಗಳಲ್ಲಿ ಅದು ಮಾರಣಾಂತಿಕ ರೋಗ. ಅವನ ಫ್ಯಾಮಿಲಿ ಡಾಕ್ಟರ್ ಹೆಸರು ಪಟೇಲ್. ಜಿನ್ನಾ ಸಾವಿನ ಅಂಚಿನಲ್ಲಿದ್ದಾನೆಂದು ತಿಳಿದರೂ, ವೃತ್ತಿ ಮೌಲ್ಯಕ್ಕೆ ಕಟ್ಟುಬಿದ್ದು ಈ ವಿಷಯವನ್ನು ಯಾರಿಗೂ ತಿಳಿಸಲಿಲ್ಲ. ತಿಳಿಸಿದ್ದರೆ ಗಾಂಧೀಜಿ, ನೆಹರೂ ದೇಶ ವಿಭಜನೆ ಪ್ರಸ್ತಾಪವನ್ನು ಹೇಗಾದರೂ ಮುಂದಕ್ಕೆ ಹಾಕುತ್ತಿದ್ದರು. ಆ ಪ್ರಸ್ತಾಪ ನಿಧಾನವಾಗಿ ತಣ್ಣಗಾಗಿರುತ್ತಿತ್ತು.

ಹಿಂದೂ ಕುಲ ಹಿರಿಯರು ಪ್ರೇಮ್‌ಜಿಭಾಯ್ (ಜಿನ್ನಾನ ತಾತ)ನನ್ನು ಮತ್ತೆ ಜಾತಿಗೆ ಸೇರಿಸಿಕೊಂಡಿದ್ದರೂ ನೆಹರೂ ಪಾರ್ಟಿಯಲ್ಲಿ ಆ ಮಾತು ಆಡದೇ ಇದ್ದಿದ್ದರೂ ಪಾಕಿಸ್ತಾನ್ ಹುಟ್ಟುತ್ತಿರಲಿಲ್ಲ. ಇಂದಿಗೂ ಉರಿಯುತ್ತಿರುವ ಕಾಶ್ಮೀರ್ ಸಮಸ್ಯೆಯೂ ಇರುತ್ತಿರಲಿಲ್ಲ.

ಚರಿತ್ರೆಕಾರರು ಇದನ್ನು 'ಬಟರ್ ಫ್ಲೈ– ಎಫೆಕ್ಟ್'ಗೆ ದೊಡ್ಡ ಉದಾಹರಣೆ ಎಂದು ಹೇಳುತ್ತಾರೆ.

ಪ್ರೇಮ್ ಬದುಕಿನಲ್ಲಿ ಕಲ್ಯಾಣಿ ಪ್ರವೇಶಿಸಿದ್ದು ಕೂಡ ಅಂತಹುದೇ.

***

ಪ್ರೇಮ್, ಅವನ ಸ್ನೇಹಿತ ಸರ್ವೇಶ್ವರ್ ಮರದ ಹಿಂದೆ ಡ್ರಗ್ಸ್ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದಾಗ ಯಾರೋ ಕಿರುಚಿದ್ದು ಕೇಳಿಸಿತು. ಹೋಗಿ ನೋಡಿದರೆ ಸ್ವಿಮ್ಮಿಂಗ್ ಪೂಲ್‌ನಲ್ಲಿ ಒಬ್ಬ ಹುಡುಗಿ 'ಹೆಲ್ಪ್ ಹೆಲ್ಪ್' ಎಂದು ಕೂಗುತ್ತಿರುವುದು ಕಾಣಿಸಿತು. ಪೂಲ್ ಆಳವಾಗಿರಲಿಲ್ಲ. ಬಹುಶಃ ಅವಳು ನೀರಿಗೆ ಇಳಿದಿದ್ದು ಮೊದಲ ಸಲವಿರಬೇಕು, ಭಯದಿಂದ ಕೂಗುತ್ತಿದ್ದಳು.

ಪ್ರೇಮ್ ನೀರಿಗೆ ಧುಮುಕಿ ಅವಳನ್ನು ಹಿಡಿದು ಹೊರಗೆ ತಂದನು.

'ಥ್ಯಾಂಕ್ಸ್' ಎಂದಳಾಕೆ. ಅವಳ ಸ್ಪರ್ಶಸುಖದಿಂದ ಅವನಿನ್ನೂ ಚೇತರಿಸಿಕೊಂಡಿರಲಿಲ್ಲ. ನಡು, ಕಾಲುಗಳು, ತೊಡೆಗಳು, ಕುತ್ತಿಗೆಯ ಸುತ್ತ ಹಾಕಿದ ಕೈಗಳು.... ಅವನನ್ನು ಡ್ರಗ್ಸ್‌ಗಿಂತ ತೀವ್ರವಾದ ಮತ್ತಿನಲ್ಲಿ ಮುಳುಗಿಸಿದವು. ಒದ್ದೆಯಾದ ಬಟ್ಟೆಯೊಳಗಿನ ಅವಳ ದೇಹವು ಕಣ್ಣು ಬೇರೆ ಕಡೆ ತಿರುಗಿಸಲು ಆಸ್ಪದ ನೀಡಲಿಲ್ಲ.

'ನೀವು?' ಎಂದು ಕೇಳಿದನು.

'ಕಲ್ಯಾಣಿ' ಎಂದು ಉತ್ತರಿಸಿದಳು.

ಈ ಬಟರ್ ಫ್ಲೈ ಎಫೆಕ್ಟ್ ಯಾರ ಬದುಕನ್ನು ಹೇಗೆ ಬದಲಾಯಿಸುತ್ತದೆಯೋ ಕಾಲವೇ ನಿರ್ಣಯಿಸಬೇಕು. ಅದನ್ನು ತಿಳಿಯಬೇಕೆಂದರೆ ಕೆಲವು ದಿನಗಳ ಹಿಂದಕ್ಕೆ ಹೋಗಬೇಕು.

### –11–

'ನಿಮ್ಮ ಇನ್ವೆಸ್ಟಿಗೇಷನ್ ಎಲ್ಲಿಯವರೆಗೆ ಬಂತು?' ಎಂದು ಕೇಳಿದಳು ಕಲ್ಯಾಣಿ.

'ಎಲ್ಲ ರಾಜ್ಯಗಳ ಆಂಟೀ ಟೆರರಿಸ್ಟ್ ಸ್ಕ್ವಾಡ್ ಆಫೀಸ್‌ಗಳಿಗೆ ಮಿಜ್ರಾಡಿನ್‌ನ ಫೋಟೋ